

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–09–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಶ್ರೇಷ್ಠತೆ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಇಂದು ಕೂಡ ಅದನ್ನೇ ಮುಂದುವರೆಸಲಾಗುವುದು.

الَّذِينَ اسْتَجَابُوا لِلَّهِ وَالرَّسُولِ مِنْ بَعْدِ مَا أَصَابَهُمُ الْقَرْحُ لِلَّذِينَ أَحْسَنُوا مِنْهُمْ وَاتَّقَوْا أَجْرٌ عَظِيمٌ

ಎಂದರೆ, ತಮಗೆ ಗಾಯವಾದ ನಂತರ (ಕೂಡ) ಅಲ್ಲಾಹನ ಮತ್ತು ಸಂದೇಶವಾಹಕನ ಕರೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವಭಕ್ತರಿಗೂ ಮಹತ್ತಾದ ಪ್ರತಿಫಲವಿದೆ.

ಈ ವಚನವನ್ನು ಉಲ್ಲೇಖಿಸುತ್ತಾ ಹಝ್ರತ್ ಆಯಿಶ(ರ) ತನ್ನ ಸಹೋದರಿ ಪುತ್ರನಾದ ಉರ್‌ವರೊಡನೆ ಹೀಗೆ ಹೇಳಿದರು: ನಿನ್ನ ತಂದೆಯಾದ ಝುಬೇರ್(ರ) ಮತ್ತು ಹಝ್ರತ್ ಅಬೂಬಕರ್(ರ) ಹೀಗೆ ಗಾಯಗೊಂಡವರಲ್ಲಿ ಸೇರಿದ್ದರು. ಅದು ಹೇಗೆಂದರೆ, ಹಝ್ರತ್ ಪೈಗಂಬರ್(ಸ)ರಿಗೆ ಉಹದ್ ಯುದ್ಧದ ದಿನದಂದು ಕಷ್ಟತೆಯುಂಟಾಯಿತು ಮತ್ತು ಮುಶ್ರಿಕರು ಹೊರಟುಹೋದರು. ಮುಶ್ರಿಕರು ಮರಳಿ ಬರಬಹುದು ಎಂಬ ಶಂಕೆಯಿಂದ ಅವರನ್ನು ಹಿಂಬಾಲಿಸಲು ಯಾರು ಹೋಗುವರು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಆಗ 70 ವ್ಯಕ್ತಿಗಳು ಅದಕ್ಕಾಗಿ ತಯಾರಾದರು. ಅವರಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಝುಬೇರ್(ರ) ಸಹ ಇದ್ದರು.

ಉಹದ್ ಯುದ್ಧದ ನಂತರ, ಮುಂದಿನ ವರ್ಷ ಬದ್ರ್ ಪ್ರದೇಶದಲ್ಲಿ ಯುದ್ಧ ನಡೆಯುವುದು ಎಂದು ವಾಗ್ದಾನವನ್ನು ಮಾಡಿಕೊಂಡು ಅಬೂಸುಫ್‌ಯಾನ್ ತನ್ನ ಸೈನ್ಯದೊಂದಿಗೆ ಮಕ್ಕದ ಕಡೆಗೆ ಹೊರಟರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೀಗೆ ವಿವರಿಸಿರುವರು: ಹೆಚ್ಚಿನ ಮುನ್ನೆಚ್ಚರಿಕಾ ಕ್ರಮವೆಂಬಂತೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಝುಬೇರ್(ರ) ಒಳಗೊಂಡ 70 ಸಹಾಬಿಯರ ಒಂದು ಸಂಘವನ್ನು ಖುರೈಶಿನ ಸೈನ್ಯವನ್ನು ಹಿಂಬಾಲಿಸಲು ಕಳುಹಿಸಿದರು. ಕೆಲವು ವರದಿಗಳ ಪ್ರಕಾರ ಹಝ್ರತ್ ಸಅದ್ ಬಿನ್ ವಖಾಸ್(ರ)ರನ್ನು ಸುದ್ದಿ ತರಲು ಖುರೈಶಿಗಳ ಹಿಂದೆ ಕಳುಹಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಖುರೈಶಿಗಳು ಕುದುರೆಗಳನ್ನು ಖಾಲಿ ಬಿಟ್ಟು ಒಂಟೆಗಳ ಮೇಲೆ ಸವಾರರಾಗಿದ್ದರೆ ಅವರು ಮಕ್ಕಗೆ ಹಿಂದಿರುಗುತ್ತಿದ್ದಾರೆ ಎಂದು ತಿಳಿಯಿರಿ. ಆದರೆ ಅವರು ಕುದುರೆಗಳ ಮೇಲೆ ಸವಾರರಾಗಿದ್ದರೆ, ಅವರ ಉದ್ದೇಶ ಸರಿಯಲ್ಲವೆಂದು ತಿಳಿದುಕೊಳ್ಳಬೇಕಾಗಿದೆ. ಖುರೈಶಿಗಳ ಸೈನ್ಯದ ದಿಕ್ಕು ಮದೀನದ ಕಡೆಗೆ ಆಗಿದ್ದರೆ, ಬೇಗನೇ ತಿಳಿಸಬೇಕು. ಹಾಗೇನಾದರೂ ಖುರೈಶಿಗಳು ಮದೀನದ ಮೇಲೆ ದಾಳಿ ನಡೆಸಿದರೆ, ಅಲ್ಲಾಹನಾಣೆ, ನಾವು ಅವರಿಗೆ ದಾಳಿಯ ರುಚಿಯನ್ನು ತಿಳಿಸುವೆವು.' ಆದರೆ ಖುರೈಶಿಗಳ ಸೈನ್ಯ ಮಕ್ಕದ ಕಡೆಗೆ ಮರಳಿ ಹೋಗುತ್ತಿದ್ದಾರೆ ಎಂಬ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು.

ಹುದೈಬಿಯ ಸಂಧಿಯ ನಿಬಂಧನೆ ಪ್ರಕಾರ ಅಬೂಜಂದಲ್‌ರನ್ನು ಹಝ್ರತ್ ಪೈಗಂಬರ್(ಸ) ಮರಳಿಸಿದಾಗ ಸಹಾಬಿಯರು ಬಹಳ ಆವೇಶದಲ್ಲಿದ್ದರು. ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸಿ ಹೀಗೆ ಹೇಳಿದರು: ನಾನು ನಿಮಗೆ ಅನೇಕ ಆದೇಶಗಳನ್ನು ನೀಡಿದ್ದೇನೆ. ಆದರೆ ನಿಮ್ಮಲ್ಲಿ ಅತ್ಯಂತ ನಿಷ್ಠಾವಂತ ಜನರಲ್ಲೂ ನಾನು ಕೆಲವು ವಿರೋಧದ ಲಕ್ಷಣವನ್ನು ಕಂಡಿದ್ದೇನೆ. ಆದರೆ ಅಬೂಬಕರ್‌ರಲ್ಲಿ ನಾನು ಈ ಲಕ್ಷಣವನ್ನು ಕಂಡಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹುದೈಬಿಯ ಸಂಧಿಯ ಸಂದರ್ಭದಲ್ಲಿ ಹಝ್ರತ್ ಉಮರ್(ರ)ರಂತಹ ವ್ಯಕ್ತಿ ಕೂಡ ಕಳವಳಗೊಂಡರು. ಗಾಬರಿಯ ಸ್ಥಿತಿಯಲ್ಲಿ ಅವರು ಹಝ್ರತ್ ಅಬೂಬಕರ್(ರ)ರ ಬಳಿಗೆ ಹೋದರು. ನಾವು ಉಮ್ರಾ ಮಾಡುವೆವು ಎಂಬ ಅಲ್ಲಾಹನ ವಾಗ್ದಾನ ನಮ್ಮೊಡನೆ ಇರಲಿಲ್ಲವೇ ಎಂದು ಹಝ್ರತ್ ಉಮರ್(ರ) ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಹೌದು, ಅಲ್ಲಾಹನ ವಾಗ್ದಾನವಿತ್ತು. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಮಗೆ ಸಹಾಯ ಮತ್ತು ನೆರವು ನೀಡುವನು ಎಂದು ಅಲ್ಲಾಹನು ವಾಗ್ದಾನ ಮಾಡಿರಲಿಲ್ಲವೇ? ಹೌದೆಂದು ಹಝ್ರತ್ ಅಬೂಬಕರ್(ರ) ಹೇಳಿದರು. ನಾವು ಉಮ್ರಾ ಮಾಡಿದೆವೇ? ಎಂದು ಹಝ್ರತ್ ಉಮರ್(ರ) ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಉಮರ್, ನಾವು ಇದೇ ವರ್ಷ ಉಮ್ರ ಮಾಡುವೆವು ಎಂದು ಅಲ್ಲಾಹನು ಯಾವಾಗ ಹೇಳಿದ್ದನು? ನಮಗೆ ಸಹಾಯ ಮತ್ತು ವಿಜಯ ಲಭಿಸಿತೇ? ಎಂದು ಹಝ್ರತ್ ಉಮರ್(ರ) ಪುನಃ ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಸಹಾಯ ಮತ್ತು ನೆರವಿನ ಅರ್ಥವನ್ನು ಅಲ್ಲಾಹನು ಮತ್ತು ಅಲ್ಲಾಹನ ಪ್ರವಾದಿಯು ನಮಗಿಂತ ಚೆನ್ನಾಗಿ ತಿಳಿದಿದ್ದಾರೆ. ಉಮರ್(ರ)ರಿಗೆ ಈ ಉತ್ತರದಿಂದ ಸಮಾಧಾನವಾಗಲಿಲ್ಲ. ಅವರು ಅದೇ ಗಾಬರಿಯ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದರು ಮತ್ತು ಹೀಗೆ ಕೇಳಿದರು: ಯಾ ರಸೂಲುಲ್ಲಾಹ್, ನಾವು ಮಕ್ಕದಲ್ಲಿ ತವಾಫ್ ಮಾಡುತ್ತಾ ಪ್ರವೇಶಿಸುವೆವು ಎಂದು ನಮ್ಮೊಡನೆ ಅಲ್ಲಾಹನ ವಾಗ್ದಾನವಿರಲಿಲ್ಲವೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಉಮರ್(ರ) ಕೇಳಿದರು: ನಾವು ಅಲ್ಲಾಹನ ಜಮಾಅತ್ ಅಲ್ಲವೇ? ಅಲ್ಲಾಹನು

ನಮಗೆ ಸಹಾಯ ಮತ್ತು ನೆರವು ನೀಡುವನು ಎಂದು ಅಲ್ಲಾಹನು ವಾಗ್ದಾನ ಮಾಡಿರಲಿಲ್ಲವೇ? ಇತ್ತೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನಾವು ಉಮ್ರಾ ಮಾಡಿದ್ದೇವೆಯೇ? ಎಂದು ಹಝ್ರತ್ ಉಮರ್(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಇದೇ ವರ್ಷ ಉಮ್ರ ಮಾಡುವೆವು ಎಂದು ಅಲ್ಲಾಹನು ಯಾವಾಗ ಹೇಳಿದ್ದನು? ಈ ವರ್ಷ ಉಮ್ರ ನಡೆಯುವುದು ಎಂಬುದು ನನ್ನ ಅನಿಸಿಕೆಯಾಗಿತ್ತು. ಅಲ್ಲಾಹನು ಸಮಯವನ್ನು ನಿಶ್ಚಯಿಸಿರಲಿಲ್ಲ. ಹಝ್ರತ್ ಉಮರ್(ರ) ಕೇಳಿದರು: ಹಾಗಾದರೆ, ಸಹಾಯ ಮತ್ತು ವಿಜಯದ ಅರ್ಥವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ಸಹಾಯ ಖಂಡಿತ ಉಂಟಾಗುವುದು. ಅವನು ಮಾಡಿದ ವಾಗ್ದಾನ ಖಂಡಿತ ಈಡೇರುವುದು. ಹೀಗೆ ಹಝ್ರತ್ ಅಬೂಬಕರ್(ರ) ನೀಡಿದ ಅದೇ ಉತ್ತರವನ್ನು ಹಝ್ರತ್ ಪೈಗಂಬರ್(ಸ) ನೀಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇತರ ಧರ್ಮದವರ ಭಾವನೆಗಳ ಬಗ್ಗೆಯೂ ಹಝ್ರತ್ ಪೈಗಂಬರ್(ಸ) ಬಹಳ ಕಾಳಜಿ ವಹಿಸುತ್ತಿದ್ದರು. ಒಂದು ಬಾರಿ ಹಝ್ರತ್ ಅಬೂಬಕರ್(ರ)ರ ಮುಂದೆ ಒಬ್ಬ ಯಹೂದಿ ಹೀಗೆ ಹೇಳಿದನು: ಎಲ್ಲ ಪ್ರವಾದಿಗಳ ಮೇಲೆ ಮೂಸಾರಿಗೆ ಶ್ರೇಷ್ಠತೆ ನೀಡಿರುವ ದೇವನಾಣೆ. ಇದನ್ನು ಆಲಿಸಿದ ಹಝ್ರತ್ ಅಬೂಬಕರ್(ರ) ಅವನ ಕಪಾಳಕ್ಕೆ ಹೊಡೆದರು. ಈ ಘಟನೆಯ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಸುದ್ದಿ ತಲುಪಿದಾಗ, ಅವರು ಹಝ್ರತ್ ಅಬೂಬಕರ್(ರ)ರೊಡನೆ ಬೇಸರ ವ್ಯಕ್ತಪಡಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವೇಕೆ ಹೀಗೆ ವರ್ತಿಸಿದಿರಿ? ಯಹೂದಿಗೆ ಇಷ್ಟ ಬಂದ ವಿಶ್ವಾಸವನ್ನು ಕೈಗೊಳ್ಳಲು ಅವನಿಗೆ ಅಧಿಕಾರವಿದೆ. ಎಂದರೆ, ಅವನ ನಂಬಿಕೆ ಪ್ರಕಾರ ಇಷ್ಟಬಂದದ್ದನ್ನು ಹೇಳಲು ಅವನಿಗೆ ಅಧಿಕಾರವಿದೆ ಎಂದು ಹೇಳಿದರು.

ಹಝ್ರತ್ ಪೈಗಂಬರ್(ಸ)ರೊಂದಿಗೆ ಹಝ್ರತ್ ಅಬೂಬಕರ್(ರ)ರಿಗೆ ಇದ್ದ ಪ್ರೇಮದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಪ್ರಸ್ತಾಪಿಸುತ್ತಾರೆ: ಮಕ್ಕದಿಂದ ಮದೀನಕ್ಕೆ ವಲಸೆ ಹೋದಾಗಲೂ, ಹಝ್ರತ್ ಪೈಗಂಬರ್(ಸ)ರ ನಿಧನದ ಸಮಯದಲ್ಲೂ ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಅತಿಯಾದ ಪ್ರೀತಿಯ ಸಂಬಂಧವಿತ್ತು. ಹಝ್ರತ್ ಪೈಗಂಬರ್(ಸ)ರ ನಿಧನದ ಭವಿಷ್ಯವಾಣಿ ಕೂಡ ಅಡಕವಾಗಿದ್ದ **ಸೂರತುನ್ನಸ್ರ್** ಹಝ್ರತ್ ಪೈಗಂಬರ್(ಸ)ರಿಗೆ ಅವತೀರ್ಣವಾದಾಗ ಸಹಾಬಿಯರನ್ನು ಸಂಬೋಧಿಸುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಲ್ಲಾಹನು ತನ್ನ ಒಬ್ಬ ದಾಸನಿಗೆ, ತನ್ನ ಸಾಮೀಪ್ಯ ಮತ್ತು ಭೌತಿಕ ಪ್ರಗತಿ, ಎರಡರಲ್ಲಿ ಒಂದನ್ನು ಆಯ್ಕೆ ಮಾಡಲು ಅನುಮತಿ ನೀಡಿದನು. ನಾನು ಅಲ್ಲಾಹನ ಸಾಮೀಪ್ಯಕ್ಕೆ ಆದ್ಯತೆ ನೀಡಿದೆನು. ಇದನ್ನು ಆಲಿಸಿ ಸಹಾಬಿಯರು ಸಂತೋಷಗೊಂಡರು. ಆದರೆ ಹಝ್ರತ್ ಅಬೂಬಕರ್(ರ) ಕಳವಳಗೊಂಡು ಜೋರಾಗಿ ಅಳಲು ಶುರುಮಾಡಿದರು. ಹಝ್ರತ್ ಅಬೂಬಕರ್(ರ) ಹೇಳಿದರು: 'ಯಾ ರಸೂಲುಲ್ಲಾಹ್, ನಿಮ್ಮ ಮೇಲೆ ನಮ್ಮ ತಂದೆ, ತಾಯಿ, ಪತ್ನಿ ಮಕ್ಕಳು ಎಲ್ಲರೂ ಅರ್ಪಿತವಾಗಲಿ. ನಿಮಗಾಗಿ ನಾವು ಎಲ್ಲವನ್ನೂ ತ್ಯಾಗಮಾಡಲು ತಯಾರಿದ್ದೇವೆ' ಎಂದು ಹೇಳಿದರು. ನಿಕಟ ಸಂಬಂಧಿಕರು ರೋಗಿಯಾಗುವಾಗ, ಆಡನ್ನು ಕೊಯ್ಯಲಾಗುವ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ತನ್ನನ್ನು ಮತ್ತು ತನ್ನ ಎಲ್ಲ ನಿಕಟ ಸಂಬಂಧಿಕರನ್ನು ಹಝ್ರತ್ ಪೈಗಂಬರ್(ಸ)ರಿಗೆ ಸಮರ್ಪಿಸಿದರು. ಹಝ್ರತ್ ಅಬೂಬಕರ್(ರ) ಅಳುತ್ತಿರುವುದನ್ನು ಮತ್ತು ಈ ರೀತಿಯಾಗಿ ಮಾತನಾಡುತ್ತಿರುವುದನ್ನು ಕಂಡು ಹಝ್ರತ್ ಉಮರ್(ರ) ಸಮೇತ ಎಲ್ಲ ಸಹಾಬಿಯರು ಅಚ್ಚರಿಗೊಂಡರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಅಬೂಬಕರ್ ಬಹಳ ಪ್ರಿಯರು. ಅಲ್ಲಾಹನಲ್ಲದೇ ಬೇರೆ ಯಾರನ್ನಾದರೂ ನಿಕಟ ಸ್ನೇಹಿತನನ್ನಾಗಿ ಮಾಡಲು ಅನುಮತಿ ಇರುತ್ತಿದ್ದರೆ, ನಾನು ಅವರನ್ನು ನಿಕಟ ಸ್ನೇಹಿತನನ್ನಾಗಿ ಮಾಡುತ್ತಿದ್ದೆ. ಈಗಲೂ ಅವರು ನನ್ನ ಮಿತ್ರ ಮತ್ತು ಸಂಗಡಿಗ ಆಗಿರುವರು. ಇಂದಿನಿಂದ ಮಸೀದಿಯ ಕಡೆಗೆ ತೆರೆಯಲ್ಪಡುವ ಎಲ್ಲ ಜನರ ಮನೆಯ ಕಿಟಕಿಗಳನ್ನು ಮುಚ್ಚಿರಿ – ಅಬೂಬಕರ್‌ರ ಮನೆಯ ಕಿಟಕಿಯನ್ನು ಹೊರತುಪಡಿಸಿ. ಹೀಗೆ ಹಝ್ರತ್ ಅಬೂಬಕರ್(ರ)ರಿಗೆ ತನ್ನೊಂದಿಗೆ ಇದ್ದ ಪ್ರೇಮವನ್ನು ಹಝ್ರತ್ ಪೈಗಂಬರ್(ಸ) ಹೊಗಳಿದರು. ಏಕೆಂದರೆ, ಅದು ಪರಿಪೂರ್ಣವಾದ ಪ್ರೇಮವಾಗಿತ್ತು. ಈ ವಿಜಯ ಮತ್ತು ಸಹಾಯದ ವಾರ್ತೆಯ ಹಿಂದೆ ಹಝ್ರತ್ ಪೈಗಂಬರ್(ಸ)ರ ನಿಧನದ ವಾರ್ತೆಯು ಅಡಗಿದೆ ಎಂದು ಅವರಿಗೆ ಗೊತ್ತಿತ್ತು. ಆದ್ದರಿಂದಲೇ ಹಝ್ರತ್ ಅಬೂಬಕರ್(ರ) ತನ್ನ ಮತ್ತು ತನ್ನ ನಿಕಟ ಸಂಬಂಧಿಕರ ಜೀವವನ್ನು ಹಝ್ರತ್ ಪೈಗಂಬರ್(ಸ)ರಿಗೆ ಅರ್ಪಿಸಲು ತಯಾರಾದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಒಂದು ಬಾರಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ನಡುವೆ ಯಾವುದೋ ಒಂದು ವಿಷಯದಲ್ಲಿ ವಾಗ್ವಾದ ಉಂಟಾಯಿತು. ಜಗಳ ವರ್ಧಿಸದಿರಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಅಲ್ಲಿಂದ ಹೊರಟು ಹೋಗಲು ಸಿದ್ಧರಾದರು. ಆಗ ನನ್ನ ಮಾತಿಗೆ ಉತ್ತರ ನೀಡಿರಿ ಎಂದು ಹೇಳಿಕೊಂಡು ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ನಿಲುವಂಗಿಯನ್ನು ಹಿಡಿದ ಕಾರಣದಿಂದ ಅವರ ನಿಲುವಂಗಿ ಹರಿದುಹೋಯಿತು. ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಹಝ್ರತ್ ಉಮರ್(ರ) ತನ್ನ ತಪ್ಪನ್ನು ಒಪ್ಪಿಕೊಂಡರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಲೋಕದ ಎಲ್ಲರೂ ನನ್ನನ್ನು ನಿರಾಕರಿಸಿದಾಗ ಅಬೂಬಕರ್(ರ) ನನ್ನನ್ನು ನಂಬಿದ್ದರು ಮತ್ತು ಎಲ್ಲ ರೀತಿಯಲ್ಲೂ ನನಗೆ ನೆರವಾದರು. ಇದನ್ನು ಹೇಳುತ್ತಿದ್ದ ಅದೇ ವೇಳೆ ಹಝ್ರತ್ ಅಬೂಬಕರ್ ಸಹ ಅಲ್ಲಿಗೆ ತಲುಪಿದರು. ಹಝ್ರತ್ ಪೈಗಂಬರ್(ಸ)ರ ಅಸಂತುಷ್ಟಿಯನ್ನು ಕಂಡುಕೊಂಡು ಹಝ್ರತ್ ಅಬೂಬಕರ್ ತನ್ನ ತಪ್ಪೊಪ್ಪಿಕೊಂಡರು. ಇದಾಗಿತ್ತು ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೇಮ. ಹಝ್ರತ್ ಪೈಗಂಬರ್(ಸ)ರ ದುಃಖವನ್ನು ಅವರಿಂದ ಸಹಿಸಲಾಗುತ್ತಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಕೆಲವು ಗೋತ್ರಗಳ ಜನರು ಝಕಾತ್ ನೀಡುವುದನ್ನು ನಿರಾಕರಿಸಿದರು. ಆಗ ಹಝ್ರತ್ ಅಬೂಬಕರ್(ರ) ಅವರ ವಿರುದ್ಧ ಯುದ್ಧ ಮಾಡಲು ನಿರ್ಧರಿಸಿದರು. ಅವರೊಡನೆ ಸೌಮ್ಯವಾಗಿ ವರ್ತಿಸಲು ಹಝ್ರತ್ ಉಮರ್(ರ) ಸಲಹೆ ನೀಡಿದರು. ಆದರೆ ಹಝ್ರತ್ ಅಬೂಬಕರ್(ರ) ಹೀಗೆ ಉತ್ತರಿಸಿದರು: ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ರದ್ದುಗೊಳಿಸಲು ಅಬೂಖಹಾಫನ ಪುತ್ರನು ಹೇಗೆ ಧೈರ್ಯಪಡುವನು? ಈ ಜನರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಒಂದು ಹಗ್ಗವನ್ನು ಕೂಡ ಝಕಾತ್ ಆಗಿ ನೀಡಿದ್ದರೆ, ನಾನು ಅವರಿಂದ ಅದೇ ರೀತಿಯಲ್ಲಿ ಪಡೆಯುವೆನು. ಈ ಜನರು ಝಕಾತ್ ನೀಡುವ ತನಕ ನಾನು ಸುಮ್ಮನಿರುವುದಿಲ್ಲ. ಇದಾಗಿದೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಅವರಿಗಿದ್ದ ಪ್ರೀತಿ ಮತ್ತು ಪ್ರೇಮದ ಉದಾಹರಣೆ. ಆಪತ್ಕಾರಿ ಅವಸ್ಥೆಗಳಲ್ಲೂ, ಸಹಾಬಿಯರು ಯುದ್ಧ ಮಾಡದಿರಲು ಸಲಹೆ ನೀಡುತ್ತಿರುವಾಗಲೂ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಈಡೇರಿಸಲು ತಯಾರಾಗುತ್ತಾರೆ. ಅದೇ ರೀತಿಯಲ್ಲಿ, ಉಸಾಮರ ಸೈನ್ಯವನ್ನು ತಡೆಯಲು ಸಹಾಬಿಯರು ನೀಡಿದ ಸಲಹೆಯನ್ನು ನಿರಾಕರಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳಿದರು: ಶತ್ರುಗಳು ಶಕ್ತಿಶಾಲಿಯಾಗಿ ಮದೀನದ ಮೇಲೆ ವಿಜಯ ಸಾಧಿಸಿದರೆ ಮತ್ತು ಮುಸ್ಲಿಂ ಮಹಿಳೆಯರ ಶವಶರೀರಗಳನ್ನು ನಾಯಿಗಳು ಎಳೆಯುತ್ತಾ ಸುತ್ತಾಡಿದರೂ ನಾನು ಹಝ್ರತ್ ಪೈಗಂಬರ್(ಸ)ರಿಂದ ತಯಾರಿಸಲ್ಪಟ್ಟ ಸೈನ್ಯವನ್ನು ತಡೆಯಲಾರೆನು.

ಇರಾಕ್ ವಿಜಯಗಳ ನಂತರ ಲಭಿಸಿದ ಒಂದು ಚಾದರವನ್ನು ಹಝ್ರತ್ ಖ಼ಾಲಿದ್(ರ) ಸೈನಿಕರೊಂದಿಗೆ ಸಮಾಲೋಚನೆ ನಡೆಸಿದ ನಂತರ ಹಝ್ರತ್ ಅಬೂಬಕರ್(ರ)ರಿಗೆ ಕೊಡುಗೆಯಾಗಿ ಕಳುಹಿಸಿದರು. ಅದನ್ನು ನೀವು ಪಡೆಯಿರಿ, ಅದು ನಿಮಗಿರುವ ಕೊಡುಗೆಯಾಗಿದೆ ಎಂದು ಬರೆದು ತಿಳಿಸಿದರು. ಆದರೆ ಅದನ್ನು ಪಡೆಯಲು ಹಝ್ರತ್ ಅಬೂಬಕರ್(ರ) ಇಷ್ಟಪಡಲಿಲ್ಲ. ತನ್ನ ಸಂಬಂಧಿಕರಿಗೂ ಕೊಡಲಿಲ್ಲ. ಬದಲಾಗಿ ಅದನ್ನು ಹಝ್ರತ್ ಇಮಾಂ ಹುಸೈನ್(ರ)ರಿಗೆ ನೀಡಿದರು.

(ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು ಎಂದು ಹುಝೂ಼ರ್ ಹೇಳಿದರು.)

(ಖುತ್ಬದ ಕೊನೆಯಲ್ಲಿ, ಇಬ್ಬರು ದಿವಂಗತರ ಬಗ್ಗೆ ಹುಝೂ಼ರ್ ಪ್ರಸ್ತಾಪಿಸಿದರು. ಅವರಲ್ಲಿ ಮೊದಲನೆಯದ್ದಾಗಿ ತಹ್ರೀಕ್ ಜದೀದಿನ ವಕೀಲುಲ್ ಝಿರಾಅತ್ ಆಗಿದ್ದ ಸನ್ಮಾನ್ಯ ಸಮೀಉಲ್ಲಾಹ್ ಸಿಯಾಲ್ ಸಾಹಿಬ್‌ರದ್ದಾಗಿದೆ. ಎರಡನೆಯದ್ದಾಗಿ ವಖ್ಫೇ ಜದೀದಿನ ಮುಅಲ್ಲಿಂ ಆಗಿದ್ದ ದಿವಂಗತ ಅಲಿ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಿದ್ದೀಖ ಬೇಗಂ ಸಾಹಿಬರದ್ದಾಗಿದೆ.)

(ಈ ಇಬ್ಬರು ದಿವಂಗತರ ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿ ಹುಝೂ಼ರ್ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, on 23-09-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon